# 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

# C .C.No.520/25

| | | |
|---|---|---|
| **ಹೆಸರುಃ** | **ನಿಶಾಂತ್** | **CW**- 4 |
| **ತಂದೆ/ಗಂಡ ಹೆಸರುಃ** | **ನಿಂಗೇಗೌಡ** | **PW**- 4 |
| **ವಯಸ್ಸುಃ** | **32 ವರ್ಷ** | |
| **ವೃತ್ತಿಃ** | **ವ್ಯಾಪಾರ** | |
| **ವಿಳಾಸಃ** | **ಅತ್ತಿಹಳ್ಳಿ ಗ್ರಾಮ** | **ದಿನಾಂಕಃ 30.07.2026.** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ನನಗೆ ಚಾಸಾ.1 ರಿಂದ 3 ಮತ್ತು 5 ರವರ ಪರಿಚಯ ಇದೆ. ಆರೋಪಿ ಪರಿಚಯ ಇದೆ.

ಸಾಕ್ಷಿದಾರರು ನಿಪಿ.6 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ.6ಸಿ ಎಂದು ಗುರುತಿಸಲಾಯಿತು. ಆರೋಪಿಯು ದಿಃ 12.02.2025 ರಂದು ರಾತ್ರಿ 07.30 ಗಂಟೆಗೆ ಕಾರಿನಲ್ಲಿ ಬಂದು ಮಣ್ಣಿನ ರಸ್ತೆಗೆ ಬಂದು ಗುದ್ದಿದ್ದು, ಅವರನ್ನು ಹಿಂಬಾಲಿಸಿಕೊಂಡು ಚಾಸಾ.2 ಮತ್ತು 3 ರವರು ಬಂದಿರುತ್ತಾರೆ. ಚಾಸಾ.2 ಮತ್ತು 3 ರವರು ಆರೋಪಿಯು ನಮ್ಮ ಮನೆ ಬಳಿ ಬಂದು ಕಿಟಕಿಯಲ್ಲಿ ಇಣುಕಿ ನೊಡುತ್ತಿದ್ದು, ತಮ್ಮನ್ನು ನೋಡಿ ತಪ್ಪಿಸಿಕೊಂಡು ಬಂದಿರುವುದಾಗಿ ನನಗೆ ತಿಳಿಸಿರುತ್ತಾರೆ. ಮಾರನೇ ದಿನ ಅವರು ದೂರನ್ನು ನೀಡಿದ್ದು, ಸದರಿ ದೂರಿನ ಮೇರೆಗೆ ಪೊಲೀಸರು ಪಂಚನಾಮೆಗೆಂದು ದಿಃ 14.02.2025 ರಂದು ನನ್ನ ಅಂಗಡಿ ಮುಂಭಾಗದಲ್ಲಿ ಮ 01.00 ಗಂಟೆಗೆ ಬಂದಿರುತ್ತಾರೆ. ಪೊಲೀಸರು ಚಾಸಾ.2 ರವರು ಸ್ಥಳ ತೋರಿಸಿದಂತೆ ಚಾಸಾ.3, ನನ್ನ ಮತ್ತು 5 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಸದರಿ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಪಿ ಎಂ ವಕೀಲರಿಂದಃ**

ಚಾಸಾ.2 ನನ್ನ ಸಂಬಂಧಿಕರಲ್ಲ, ಊರಿನವರು. ಆರೋಪಿಯು ನನ್ನ ಅಂಗಡಿಯಿಂದ 50 ಅಡಿ ದೂರದಲ್ಲಿ ಕಾರ್ ನ್ನು ನಿಲ್ಲಿಸಿರುತ್ತಾರೆ. ಆರೋಪಿಯ ಕಾರ್ ಸದರಿ ದಿನ ಸ್ವಲ್ಪ ಜಖಂ ಆಗಿತ್ತು. ಕಾರಿನಲ್ಲಿ ಆರೋಪಿ ಮೊಬೈಲ್ ಮತ್ತು ಪರ್ಸ್ ಬಿಟ್ಟುಹೋಗಿದ್ದರು. ಗಾಡಿಯ ಹೆಡ್ ಲೈಟ್ ಉರಿಯುತ್ತಿತ್ತು. ಅದನ್ನು ಬೇರೆಯವರು ಬಂದು ಆರಿಸಿರುತ್ತಾರೆ. ಮೊಬೈಲ್ ಮತ್ತು ಪರ್ಸ್ ನ್ನು ಯಾರು ತೆಗೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಅಂಗಡಿಯ ಬಳಿ ಬಂದಾಗ 07.30 ಗಂಟೆಯಾಗಿತ್ತು. ಆರೋಪಿ ತಲುಪಿದ ತಕ್ಷಣ ಒಂದೆರೆಡು ನಿಮಿಷದಲ್ಲಿ ಚಾಸಾ.2 ರವರು ಸ್ಥಳಕ್ಕೆ ಬಂದಿರುತ್ತಾರೆ. ಅಷ್ಟರಲ್ಲಿ ಆರೋಪಿ ಓಡಿ ಹೋಗಿರುತ್ತಾರೆ. ಸದರಿ ಸಮಯದಲ್ಲಿ ನಮ್ಮ ಅಂಗಡಿ ಬಳಿ ಸುಮಾರು 20 ಜನ ಇದ್ದರು. ಚಾಸಾ.2 ಮತ್ತು ಸಂತೋಷ, ಪರಮೇಶ್, ಹರೀಶ್ ಪೂಜಾರಿಯವರ ವಿರುದ್ದ ಆರೋಪಿಯು ದೂರಿ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಅಂಗಡಿಯ ಪಕ್ಕ 4 ಮನೆ ಒಂದು ಹೋಂ ಸ್ಟೇ ಇದೆ. ಘಟನೆ ನಡೆದ ಸ್ಥಳದಿಂದ 100 ಮೀಟರ್ ದೂರದಲ್ಲಿ ಕೆನಫಿ ಹೋಂ ಸ್ಟೇ ಇದೆ. ಅದಕ್ಕಿಂತ ಹಿಂಭಾಗದಲ್ಲಿ ಮನೆಗಳು ಇವೆ.

ಅದೇ ದಿನ ಆರೋಪಿಯ ಜೊತೆಗೆ ಚಾಸಾ.2 ರವರು ಅವರ ಕಡೆಯವರು ಗಲಾಟೆ ಮಾಡಿದ್ದರು ಎಂದರೆ ಸರಿಯಲ್ಲ. ಚಾಸಾ.2 ರವರು ಮತ್ತು ಅವರ ಕಡೆಯವರು ಸೇರಿ ಆರೋಪಿಯ ಗಾಡಿಯನ್ನು ಜಖಂ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ನಿಪಿ.6 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನ 4-5 ಜನ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಪಂಚನಾಮೆ ಸ್ಥಳದಲ್ಲಿ ಬರವಣಿಯನ್ನು ಮಾಡಿರುತ್ತಾರೆ. ಪಂಚನಾಮೆ ಬರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಮತ್ತು ಚಾಸಾ.2 ರವರ ವಾಹನದ ಸಂಖ್ಯೆ ನನಗೆ ನೆನಪಿಲ್ಲ. ಪಂಚನಾಮೆ ಸ್ಥಳದ ಪೂಃ ಹೋಂ ಸ್ಟೇ ಮತ್ತು ಅಂಗಡಿ, ಪಃ ಮನೆ, ಉಃ ಮನೆ, ದಃ ರಸ್ತೆ ಮತ್ತು ಮನೆಗಳು ಇವೆ. ಪೊಲೀಸರು ಸ್ಥಳಕ್ಕೆ ಸದರಿ ದಿನ ಲ್ಯಾಪ್ ಟಾಪ್ ತೆಗೆದುಕೊಂಡು ಬಂದಿದ್ದು, ಅದರಲ್ಲಿ ಪಂಚನಾಮೆಯನ್ನು ಟೈಪ್ ಮಾಡಿರುತ್ತಾರೆ. ಅತ್ತಿಹಳ್ಳಿಯಲ್ಲಿರುವ ಅಂಗಡಿಯಲ್ಲಿ ಪಂಚನಾಮೆಯನ್ನು ಪ್ರಿಂಟ್ ತೆಗೆದಿರುತ್ತಾರೆ, ಅತ್ತಿಹಳ್ಳಿಯಲ್ಲಿ ಮಧು ಮತ್ತು ಇನ್ನೊಬ್ಬರ ಅಂಗಡಿ ಇದ್ದು, ಅವುಗಳಲ್ಲಿ ಯಾರ ಅಂಗಡಿಯಲ್ಲಿ ಪ್ರಿಂಟ್ ತೆಗೆದಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಯು ನನ್ನ ಅಂಗಡಿಯ ಬಳಿ ಬಂದು ಮಣ್ಣಿಗೆ ಕಾರಿನಿಂದ ಗುದ್ದಿರುವುದಿಲ್ಲ, ಅಲ್ಲಿಗೆ ಚಾಸಾ.2 ರವರು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಬಂದಿರುವುದಾಗಲೀ ಚಾಸಾ.2 ರವರು ಹಿಂಬಾಲಿಸಿಕೊಂಡು ಬಂದಿರುವುದಾಗಲೀ ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ತಂದಿದ್ದ ಲ್ಯಾಪ್ ಟಾಪ್ ನ್ನು ನಾನು ನೋಡಿರುವುದಿಲ್ಲ,ಚ ಪೊಲೀಸರು ಸ್ಥಳಕ್ಕೆ ಬಂದಿರುವುದಿಲ್ಲ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರ ಪಂಚರು ಠಾಣೆಯಲ್ಲಿ ನಿಪಿ.6ಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.2 ರವರು ಸ್ನೇಹಿತರಾಗಿದ್ದು, ಅವರು ಹೇಳಿಕೊಟ್ಟಂತೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

1ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**